14. ಆ ದಿನ ಸಂಜೆ 7.30 ಕ್ಕೆ ಮನೆಗೆ ಹಿಂದಿರುಗಿರುತ್ತೇವೆ. ನಾವು ಊರಿಗೆ ಹಿಂದಿರುಗಿದ ನಂತರ ಮಾರನೆ ದಿನ ಬೆಃ 9.00 ಗಂಟೆಗೆ ಬಂದಿರುತ್ತಾರೆ. ಚಾಸಾ-2 ಮತ್ತು 3 ಇವರನ್ನು ನಾನೇ ಕರೆಯಿಸಿರುತ್ತೇನೆ. ಪೋಲೀಸರು ನಮ್ಮ ಊರಿಗೆ ಬಂದ ನಂತರ ಒಂದು ತಾಸು ಇದ್ದರು.

15. ನಮ್ಮ ಮನೆಯ ಮುಂದೆ ನಿಪಿ-3 ರಲ್ಲಿ ಕಂಡು ಬರುವಂತೆ ರಸ್ತೆ ಜಾಗ ಇದೆ ಎಂದರೆ ಸರಿ. ಯಾವುದೇ ಘಟನೆ ನಡೆಯದಿದ್ದರೂ ಆರೋಪಿತರ ಜಾಗವನ್ನು ಒತ್ತುವರಿ ಮಾಡಿಕೊಳ್ಳು ಉದ್ದೇಶದಿಂದ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಮತ್ತು ಆರೋಪಿತರ ಹಿರಿಯರ ಕಾಲದಲ್ಲಿ ಯಾವುದೇ ವಾಜ್ಯ ಇರಲಿಲ್ಲ ಎಂದರೆ ಪ್ರಸ್ತುತ ಆರೋಪಿತರು ಖಾಲಿ ಜಾಗದ ಕಡೆಗೆ ಬಂದಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ.

16. ಆರೋಪಿತರು ತಾವು ಹಸುಗಳನ್ನು ಕಟ್ಟುತಿದ್ದ ಜಾಗದಲ್ಲಿ ವಾಸಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿ ನಮಗೆ ತಿರುಗಾಡಲು ಜಾಗ ಇಲ್ಲಾ ಎಂದು ನುಡಿಯುತ್ತಾರೆ. ನಮ್ಮ ಮನೆಯ ಮುಂದೆ ತಿರುಗಾಡಲು ಸಾಕ್ಷಷ್ಟು ಜಾಗ ಇದೆ ಎಂದರೆ ಸರಿಯಲ್ಲ. ನಾವು ಆರೋಪಿತರ ಜಾಗ ಕಸಿದುಕೊಳ್ಳು ಉದ್ದೇಶದಿಂದ ಸೃಪ್ಟಿತ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

17. ಪಂಚನಾಮೆ ಮಾಡಿದಾ ನಂತರ ಮದ್ಯಾಹ್ನ ಸುಮಾರು 12.00 ಗಂಟೆಗೆ ನಾನು ಡಿವೈಸಪಿ ಕಚೇರಿಗೆ ಹೋಗಿದ್ದೆ. ಕಚೇರಿಯಲ್ಲಿ ಮತ್ತೆ ಘಟನೆ ಬಗ್ಗೆ ಕೇಳಿದ್ದಾರೆ. ಕಚೇರಿಗೆ ನಾನು ಮತ್ತು ಚಾಸಾ-4 ನನ್ನ ಪತ್ನಿ ಹೋಗಿದ್ದೆವು. ನಾನು ಮತ್ತು ನನ್ನ ಪತ್ನಿ ಆ ದಿನ ಡಿವೈಎಸ್ ಪಿ ಕಚೇರಿಯಲ್ಲಿ ಹೇಳಿಕೆ ನೀಡಿರುತ್ತೆವೆಂದು ಸುಳ್ಳು ಹೇಳುತಿದ್ದೇನೆದರೆ ಸರಿಯಲ್ಲ. ನನಗೆ ಪ್ರಶ್ನಿತ ಘಟನೆಯಲ್ಲಿ ಯಾವುದೇ ಗಾಯಗಳು ಆಗಿಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನಂದರೆ ಸರಿಯಲ್ಲ. ಮುಮಾ- 2 ನನ್ನ ಪತ್ನಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ಮುಮಾ-1 ಬಡಿಗೆ ಸಮಾನ್ಯವಾಗಿ ಎಲ್ಲ ಕಡೆ ಸಿಗುವುದುಇದ್ದು ಅದನ್ನು 5 ನೇ ಆರೋಪಿ ನನ್ನ ಮೇಲೆ ಹಲ್ಲೆ ಮಾಡಲು ಬಳಕೆ ಮಾಡಿಲ್ಲಾ ಎಂದರೆ ಸರಿಯಲ್ಲ. ನಾನು ಘಟನೆ ದಿನ ಸಂಜೆ 5.00 ಗಂಟೆಗೆ ದೂರು ನೀಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

| Form No.4 (Civil) Deposition Sheets (R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆಃ 92/2020

ಪ್ರಾ.ಸಾ. 2 ಚಾ.ಸಾ. 4

| | | |
|---|---|---|
| ಹೆಸರು | : | ಮಾಲಿಂಗಮ್ಮ |
| ಗಂಡನ ಹೆಸರು | : | ಮಲ್ಲಪ್ಪ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಮನೆಗೆಲಸ |
| ವಾಸ | : | ಮೈಲಾಪೂರ |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 15-10-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ಚಾಸಾ-1 ನನ್ನ ಗಂಡ. ನಮ್ಮದು ಹೊಲೆಯ ಪರಿಶಿಷ್ಟ ಜಾತಿ ಇರುತ್ತದೆ. ಈ ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಆರೋಪಿ- 1, 2 ಮತ್ತು 4 ರಿಂದ 8 ಮತ್ತು ಮೃತ ಆರೋಪಿ ಗೊತ್ತು ಅವರು ಲಿಂಗಾಯತ ಜಾತಿಗೆ ಸೇರಿದವರು.

2. ನಮ್ಮ ಮತ್ತು ಆರೋಪಿತರ ಮನೆ ಎದುರು ಬದರು ಮೈಲಾಪೂರ ಗ್ರಾಮ ದಲ್ಲಿ ಇರುತ್ತದೆ. ನಾವು ಪ್ರತಿನಿತ್ಯ ಆರೋಪಿತರ ಮನೆಯ ಮುಂಭಾಗದಲ್ಲಿ ನಡೆದುಕೊಂಡು ಊರ ಒಳಗೆ ಹೋಗಬೇಕು. ನಾವು ಅವರ ಮನೆಯ ಮುಂದೆ ಹೋಗುವಾಗ ಆಗಾಗ ನಾವು ಹೊಲಯ ಜಾತಿಯವರು ಅವರ ಮನೆಯ ಮುಂದೆ ಹೋಗಬಾರದು ಎಂದು ತಕರಾರು ಮಾಡುತ್ತಿದ್ದರು. ದಾರಿಯಲ್ಲಿ ಕಲ್ಲು ಅಡ್ಡ ಹಾಕುತ್ತಿದ್ದರು. ಕಲ್ಲುಗಳನ್ನು ಅಡ್ಡ ಇಟ್ಟರೆ ಊರ ಒಳಗಡೆ ಹೇಗೆ ಓಡಾಡಬೇಕು ಎಂದು ಕೇಳುತಿದ್ದೆವು.

3. ದಿಃ 30.08.2020 ರಂದು ಬೆಃ 8.00 ಗಂಟೆಗೆ ಮೈಲಾಪೂರ ಗ್ರಾಮದ ಅವರ ಮನೆಯ ಮುಂಭಾಗದಲ್ಲಿ ಓಡಾಡುವ ದಾರಿಯಲ್ಲಿ ಆರೋಪಿತರು ಕಲ್ಲು ಹಾಕಿದ್ದು, ನನ್ನ ಪತಿ ಚಾಸಾಃ 1 ಮಲ್ಲಪ್ಪ ರವರಿಗೆ ನಮ್ಮ ಮನೆಯ ಮುಂದೆ ಹೊಲೆಯ ಜಾತಿಯವರು ಓಡಾಡ ಬೇಡಿ ಎಂದು ಆರೊಪಿತರು ಬೈದಿರುತ್ತಾರೆ. ನನ್ನ ಪತಿ ಹಿಂದಿನಿಂದಲು ಅದೆ ರಸ್ತೆಯ ಲ್ಲಿ ಓಡಾಡಿಕೊಂದು ಇರುತ್ತೆವೆ ಹೆಗೆ ಓಡಾಡುವುದು ಎಂದು ಕೆಳಿರುತ್ತಾರೆ. ಚಾಸಾಃ 1

ಅವರಿಗೆ ದಾರಿಯಲ್ಲಿನ  ಕಲ್ಲುಗಳನ್ನು ತೆಗೆಯಿರಿ ಎಂದು ಹೇಳಿರುತ್ತಾರೆ. ಆಗ ಆರೊಪಿತರು ಬೊಸಡಿ ಮಗನೆ ಹೊಲೆಯ ಜಾತಿಯ ಮಗನೆ ಅಂತಾ ಬೈಯುತ್ತಾ ನನ್ನ ಪತಿಯ ಜೊತೆ ಜಗಳ ತೆಗೆದಿರುತ್ತಾರೆ. 5 ನೇ ಆರೋಪಿ 1 ನೇ ಆರೋಪಿ ಮೃತುಂಜಯಪ್ಪನ ಬಿದುರು ಬಡಿಗೆ ತೆಗೆದು ಕೊಂಡು ನನ್ನ ಪತಿಯ ತಲೆಗೆ  ಹೊಡೆದು ರಕ್ತ ಗಾಯವಾಗಿದ್ದು ಎಲ್ಲಾ ಆರೋಪಿತರು ಕೈ ಮುಷ್ಟಿಯಿಂದ ಬೆನ್ನಿಗೆ ಹೊಟ್ಟೆಗೆ ಹೊಡೆದರು. ನಂತರ ನಾನು ಜಗಳ ಬಿಡಿಸಲು ಬಂದಾಗ ಆರೋೀಪಿ-5 ರಿಂದ 8 ನನ್ನ  ಕುಪ್ಪಸ ಹಿಡಿದು ಎಳೆದಾಡಿ, ನೆಲಕ್ಕೆ ಕೆಡವಿ ಕಾಲಿನಲ್ಲಿ ಒದ್ದಿರುತ್ತಾರೆ. ನಂತರ ಜಗಳವನ್ನು ಚಾಸಾ-5 ರಿಂದ 7 ಬಿಡಿಸಿರುತ್ತಾರೆ.

4. ನಂತರ ಆರೋಪಿತರು ಹೊಲೆಯ ಜಾತಿ ಮಗನೆ ನಿನ್ನ ಜೀವ ಸಹಿತ ಉಳಿಸುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿದ್ದಾರೆ. ನಂತರ ನಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ನಂತರ ಮನೆಯಲ್ಲಿ ವಿಚಾರಿಸಿ ಗ್ರಾಮೀಣ ಪೋ.ಠಾಣೆಗೆ ಹೋಗಿ ದೂರುಕೊಟ್ಟೆವು. ಈ ಪ್ರಕರಣ ಆರೊಪಿತರನ್ನು ನೊಡಿದರೆ ಗುರುತಿಸುತ್ತೆನೆ. ಆರೊಪಿತರ ಗುರುತು ಹಚ್ಚುವಿಕೆ ತಕರಾರು ಇಲ್ಲ ವೆಂದು ನುಡಿಯುತ್ತಾರೆ. ಆರೊಪಿತರಿಗೆ ನಮ್ಮದು ಯಾವ ಜಾತಿ ಎಂದು ತಿಳಿದಿತ್ತು. ಅವರು ನಮ್ಮ ಎದುರು ಮನೆಯವರು. ಈ ಘಟನೆಯಿಂದ ನನಗೆ ಮಾನಸಿಕವಾಗಿ ಆಘಾತವಾಗಿರುತ್ತದೆ. ಈ ಎಲ್ಲಾ ವಿಷಯವನ್ನು ಪೊಲಿಸರಿಗೆ ಹೇಳಿರುತ್ತೆನೆ.

5. ದಿಃ 31-08-2020 ರಂದು ನಾನು ಪೊಲಿಸರಿಗೆ ನನ್ನ ಕುಪ್ಪಸ ಮು ಮಾ 2 ನ್ನು ಹಾಜರು ಪಡಿಸಿದ್ದು ಅದನ್ನು ಪೊಲಿಸರು ತೆಗೆದುಕೊಂಡರು. ಆಗ ಸಮಯ ಬೆಃ 1-30 ರಿಂದ 11-30 ಆಗಿತ್ತು. ಸಾಕ್ಷಿಗೆ ಕಡತದಲ್ಲಿನ ಜಪ್ತಿ ಪಂಚನಾಮೆ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.5 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು.  ಸಾಕ್ಷಿಗೆ 1 ಭಾವಚಿತ್ರವನ್ನು  ತೋರಿಸುತ್ತಿದ್ದು ಅದರಲ್ಲಿ ನಾನು ಕಾಣುತ್ತಿದ್ದು ಸದರಿ ಭಾವಚಿತ್ರವನ್ನು ನಿಪಿ 5 ರ ಸಮಯದಲ್ಲಿ ತೆಗೆದಿರುತ್ತಾರೆಂದು ಗುರುತಿಸಿದ್ದು ಅದನ್ನು ನಿ.ಪಿ.6 ಎಂದು ಗುರುತಿಸಲಾಯಿತು. ಮು ಮಾ 1 ಮತ್ತು 2 ಗಳನ್ನು ನೊಡಿ ಸಾಕ್ಷಿ ಗುರುತಿಸುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಸಿ.ಎಸ್.ಎಂ  ವಕೀಲರಿಂದ</u>

6. ನನ್ನ ತವರು ಮನೆ ಹೊತಪೆಠ. ಆರೋಪಿತರು ನಾವು ಓಡಾಡುವ ರಸ್ತೆಯಲ್ಲಿ ಕಲ್ಲುಗಳನ್ನು ಇಟ್ಟಿದ್ದಾರೆಂದು ಪಂಚಾಯತಿಗೆ ತಕರಾರು ಮಾಡಿರುತ್ತೇವೆ . ಆರೋಪಿತರು ನಮ್ಮ ಜಾಗ ಒತ್ತುವರಿ ಮಾಡಿರುತ್ತಾರೆಂದು ಯಾವುದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿ. ಭಾವ ಚಿತ್ರದಲ್ಲಿ ಕಂಡು ಬರುವ ಟ್ರ್ಯಾಕ್ಟರ ನಮ್ಮದಲ್ಲ. ಕಲ್ಲು ಗಳನ್ನು

ರಾತ್ರಿ ತಂದು ಹಾಕಿರುತ್ತಾರೆ. ನಾವು ಊರಿನ ದೊಡ್ಡವರಿಗೆ ಕಲ್ಲು ತೆಗೆಸುವಂತೆ ಕೊರಲಿಲ್ಲ. ಆರೊಪಿತರು ಬೇರೆ ಬೇರೆ ಮನೆಗಳಲ್ಲಿ ಇರುತ್ತಾರೆಂದರೆ ಸರಿ. ಅವರುಗಳು ಒಂದು ಅಂಗಡಿ ಮತ್ತು ಹೊಟೆಲ ಇಟ್ಟು ಕೊಂಡಿರುತ್ತಾರೆಂದರೆ ಸರಿಯಲ್ಲ. ಚಾಸಾಃ 2 ಮಲ್ಲಪ್ಪ ಮತ್ತು ಮಲ್ಲಿಕಾರ್ಜುನ 3 ನೇ ಆರೋಪಿತನ ನಡುವೆ ದ್ವೇಷ ಇತ್ತು ಎಂದರೆ ನನಗೆ ಗೊತ್ತಿಲ್ಲ. ಚಾಸಾಃ 2 ಮಲ್ಲಪ್ಪನ ಅಕ್ಕನ ಮಗಳ ಪ್ರಕರಣ ಇದ್ದ ಬಗ್ಗೆ ಗೊತ್ತು. 4 ನೇ ಆರೋಪಿ ಅದರಲ್ಲಿ ಓಡಾಡಿದ್ದರೆಂದರೆ ನನಗೆ ಗೊತ್ತಿಲ್ಲ. 4 ನೇ ಆರೋಪಿ ಚಾಸಾಃ 2 ವರವ ಎದುರು ಪಕ್ಷದವರು ಇದ್ದು ಸಹಾಯ ಮಾಡುತ್ತಾರೆಂದರೆ ನನಗೆ ಗೊತ್ತಿಲ್ಲ. ಘಟನಾ ಸ್ಥಳ ಆರೊಪಿತರು ದನ ಕಟ್ಟುವ ಸ್ಥಳ ಎಂದರೆ ಸರಿಯಲ್ಲ. ಆ ಜಾಗದಲ್ಲಿ ಮನೆ ಕಟ್ಟಿಕೊಂಡಿರುತ್ತಾರೆಂದರೆ ಸರಿಯಲ್ಲ. ಘಟನೆಯ ದಿನ ನಾವು ಬೆಃ 9- 10 ಗಂಟೆಗೆ ಯಾದಗಿರಿಗೆ ನಾನು ಮತ್ತು ಚಾಸಾಃ 1 ಬಂದೆವು. ಬೆಃ 1-30 ಕ್ಕೆ ಆಸ್ಪತ್ರೆಗೆ ಹೊದೆವು. ಆಸ್ಪತ್ರೆಯಲ್ಲಿ ಸೂಮಾರು ಅರ್ಧ ತಾಸು ಇದ್ದೆವು ನಂತರ ಪೊಲಿಸ ಠಾಣೆಗೆ ಹೊಗಿ ದೂರು ನೀಡಿರುತ್ತೆವೆ. ಪೊಲೀಸ ಠಾಣೆಗೆ 12-00 ಗಂಟೆಗೆ ಹೊದೆವು ಅಲ್ಲಿ ಸೂಮಾರು ಒಂದು ಗಂಟೆ ಕಾಲ ಇದ್ದೆವು. ಠಾಣೆಯಲ್ಲಿ ನಮಗೆ ಯಾರು ಹೇಳುವುದು ಕೆಳುವುದು ಮಾಡಿಲ್ಲ ಎಂದರೆ ಸರಿ. ನಾವು ಊರಿಗೆ ಬಂದಾಗ 2-00 ಗಂಟೆ ಆಗಿತ್ತು. ಆ ದಿನ ಪೊಲೀಸರು ನಮ್ಮ ಊರಿಗೆ ಬರಲಿಲ್ಲ. ಮರುದಿನ ಬೆಃ 10-30 ಕ್ಕೆ ಪೊಲಿಸರು ಬಂದರು. ಅವರು 11-00 ಗಂಟೆಯ ವರೆಗೆ ಇದ್ದರು. ಪಂಚನಾಮೆಯಲ್ಲಿ ಎನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನಗೆ ಓದರು ಬರುವುದಿಲ್ಲ. ನನ್ನ ಗಂಡ ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಸಹಿಮಾಡಿದ್ದೆನೆಂದರೆ ಸರಿ . ಚಾಸಾಃ 2 ನಮ್ಮ ಸಂಬಂದಿ. ಚಾಸಾಃ 3 ನನ್ನ ಪತಿಯ ಸ್ನೆಹಿತ. ಆರೊಪಿತರು ನಮ್ಮನ್ನು ಹಿಂದಿನಿಂದಲೂ ಬೈಯುತ್ತಿದ್ದಾಗ ನಾವು ಪೊಲಿಸ ಠಾಣೆಯಲ್ಲಿ ದೂರು ನೀಡಿಲ್ಲ. ಆರೊಪಿತರ ಜಾಗವನ್ನು ಒತ್ತುವರಿ ಮಾಡಬೇಕು ಎಂಬ ಕಾರಣಕ್ಕೆ ಈ ಪ್ರಕರಣವನ್ನು ಆರೊಪಿತರ ವಿರುದ್ಧ ದಾಖಲಿಸಿರುತ್ತೆವೆಂದರೆ ಸರಿಯಲ್ಲ. ಮೂ ಮಾ 1 ಸಾಮಾನ್ಯ ವಾಗಿ ಎಲ್ಲಾ ಕಡೆ ದೊರೆಯುತ್ತವೆಂದೆರ ಸರಿಯಲ್ಲ. ಮುಮಾ 2 ರೀತಿಯ ಬಟ್ಟೆಗಳು ಸಾಮಾನ್ಯವಾಗಿ ನಮ್ಮೂರಿನ ಕೆರೆಯ ಅಕ್ಕ ಪಕ್ಕ ಬಿದ್ದಿರುತ್ತವೆಂದರೆ ಸರಿ.

7. ನಮ್ಮ ಮತ್ತು ಆರೋಪಿತರ ಮನೆ ಎದುರು ಬದರು ಮೈಲಾಪೂರ ಗ್ರಾಮ ದಲ್ಲಿ ಇರುತ್ತದೆ. ನಾವು ಪ್ರತಿನಿತ್ಯ ಆರೋಪಿತರ ಮನೆಯ ಮುಂಭಾಗದಲ್ಲಿ ನಡೆದುಕೊಂಡು ಊರ ಒಳಗೆ ಹೋಗಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಅವರ ಮನೆಯ ಮುಂದೆ ಹೋಗುವಾಗ ಆಗಾಗ ನಾವು ಹೊಲಯ ಜಾತಿಯವರು ಅವರ ಮನೆಯ ಮುಂದೆ ಹೋಗಬಾರದು ಎಂದು ತಕರಾರು ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾರಿಯಲ್ಲಿ ಕಲ್ಲು ಅಡ್ಡ ಹಾಕುತ್ತಿದ್ದರು ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಲ್ಲುಗಳನ್ನು ಅಡ್ಡ ಇಟ್ಟರೆ ಊರ ಒಳಗಡೆ ಹೇಗೆ ಓಡಾಡಬೇಕು ಎಂದು ಕೇಳುತಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೮. ದಿಃ **30.0೮.2020** ರಂದು ಬೆಃ **೮.00** ಗಂಟೆಗೆ ಮೈಲಾಪೂರ ಗ್ರಾಮದ ಅವರ ಮನೆಯ ಮುಂಭಾಗದಲ್ಲಿ ಓಡಾಡುವ ದಾರಿಯಲ್ಲಿ ಆರೋಪಿತರು ಕಲ್ಲು ಹಾಕಿದ್ದು, ನನ್ನ ಪತಿ ಚಾಸಾಃ 1 ಮಲ್ಲಪ್ಪ ರವರಿಗೆ ನಮ್ಮ ಮನೆಯ ಮುಂದೆ ಹೊಲೆಯ ಜಾತಿಯವರು ಓಡಾಡ ಬೇಡಿ ಎಂದು ಆರೊಪಿತರು ಬೈದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪತಿ ಹಿಂದಿನಿಂದಲು ಅದೆ ರಸ್ತೆಯಲ್ಲಿ ಓಡಾಡಿಕೊಂದು ಇರುತ್ತೆವೆ ಹೆಗೆ ಓಡಾಡುವುದು ಎಂದು ಕೆಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 1 ಅವರಿಗೆ ದಾರಿಯಲ್ಲಿನ ಕಲ್ಲುಗಳನ್ನು ತೆಗೆಯಿರಿ ಎಂದು ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಆರೊಪಿತರು ಬೊಸಡಿ ಮಗನೆ ಹೊಲೆಯ ಜಾತಿಯ ಮಗನೆ ಅಂತಾ ಬೈಯುತ್ತಾ ನನ್ನ ಪತಿಯ ಜೊತೆ ಜಗಳ ತೆಗೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **5** ನೇ ಆರೋಪಿ 1 ನೇ ಆರೋಪಿ ಮೃತುಂಜಯಪ್ಪನ ಬಿದುರು ಬಡಿಗೆ ತೆಗೆದು ಕೊಂಡು ನನ್ನ ಪತಿಯ ತಲೆಗೆ ಹೊಡೆದು ರಕ್ತ ಗಾಯವಾಗಿದ್ದು ಎಲ್ಲಾ ಆರೋಪಿತರು ಕೈ ಮುಷ್ಟಿಯಿಂದ ಬೆನ್ನಿಗೆ ಹೊಟ್ಟೆಗೆ ಹೊಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು ಜಗಳ ಬಿಡಿಸಲು ಬಂದಾಗ ಆರೋೀಪಿ-**5** ರಿಂದ **೮** ನನ್ನ ಕುಪ್ಪಸ ಹಿಡಿದು ಎಳೆದಾಡಿ, ನೆಲಕ್ಕೆ ಕೆಡವಿ ಕಾಲಿನಲ್ಲಿ ಒದ್ದಿರುತ್ತಾರೆ. ನಂತರ ಜಗಳವನ್ನು ಚಾಸಾ-**5** ರಿಂದ **7** ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**೨.** ನಂತರ ಆರೋಪಿತರು ಹೊಲೆಯ ಜಾತಿ ಮಗನೆ ನಿನ್ನ ಜೀವ ಸಹಿತ ಉಳಿಸುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ನಂತರ ಮನೆಯಲ್ಲಿ ವಿಚಾರಿಸಿ ಗ್ರಾಮೀಣ ಪೋ.ಠಾಣೆಗೆ ಹೋಗಿ ದೂರುಕೊಟ್ಟೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣ ಆರೊಪಿತರನ್ನು ನೊಡಿದರೆ ಗುರುತಿಸುತ್ತೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೊಪಿತರ ಗುರುತು ಹಚ್ಚುವಿಕೆ ತಕರಾರು ಇಲ್ಲ ವೆಂದು ನುಡಿಯುತ್ತಾರೆ. ಆರೊಪಿತರಿಗೆ ನಮ್ಮದು ಯಾವ ಜಾತಿ ಎಂದು ತಿಳಿದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ನಮ್ಮ ಎದುರು ಮನೆಯವರು. ಈ ಘಟನೆಯಿಂದ ನನಗೆ ಮಾನಸಿಕವಾಗಿ ಆಘಾತವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯವನ್ನು ಪೊಲಿಸರಿಗೆ ಹೇಳಿರುತ್ತೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ದಿಃ 31-08-2020 ರಂದು ನಾನು ಪೊಲಿಸರಿಗೆ ನನ್ನ ಕುಪ್ಪಸ ಮು ಮಾ 2 ನ್ನು ಹಾಜರು ಪಡಿಸಿದ್ದು ಅದನ್ನು ಪೊಲಿಸರು ತೆಗೆದುಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಸಮಯ ಬೆಃ 1-30 ರಿಂದ 11-30 ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.